Sri K. PUTTASWAMY.—I move:

"That the Bombay Provincial Municipal Corporations (Mysore Amendment) Bill, 1964, as amended, be passed."

Mr. DEPUTY SPEAKER.—The question is:

"That the Bombay Provincial Municipal Corporations (Mysore Amendment) Bill, 1964, as amended, be passed."

The motion was adopted.

BANGALORE WATER SUPPLY AND SEWERAGE BILL, 1964.

(Motion to consider.)

Sri K. PUTTASWAMY.—I move:

"That the Bangalore Water Supply and Sewerage Bill, 1964, be taken into consideration."

Mr. DEPUTY SPEAKER.—Motion moved:

"That the Bangalore Water Supply and Sewerage Bill, 1964, be taken into consideration."

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈ ಮಸೂದೆಯನ್ನು ನಥೆಯ ಮುಂದೆ ಇಡುವುದರ ಮೂಲಕ ಕಾನೂನು ಮಾಡುವುದರಲ್ಲಿ ಒಂದು ಹೊಸ ಅಧ್ಯಾಯವನ್ನು ನಾವು ಪ್ರಾರಂಭ ಮಾಡುತ್ತಿದ್ದೇವೆ. ಇದುವರೆಗೆ ಕೂಡ ಸಾಮಾನ್ಯವಾಗಿ ನೀರು ಸರಬರಾಜು ಮಾಡತಕ್ಕ ಜವಾಬ್ದಾರಿ ಮುನಿಸಿಪಲ್ ಕಾರ್ಪೊರೇಷನ್ ಅಥವಾ ಟೌನ್ ಮುನಿಸಿಪಾಲಿಟಿಗಳು, ಮತ್ತು ಸ್ಥಳೀಯ ಸಂಸ್ಥೆಗಳಿಗೆ ಇತ್ತು. ಬೆಂಗಳೂರು ಮಹಾ ನಗರಕ್ಕೆ ಬೇಕಾಗತಕ್ಕ ನೀರನ್ನು ಸರಬರಾಜು ಮಾಡುವ ಉದ್ದೇಶಕ್ಕಾಗಿ ಶಾಶ್ವತವಾದ ಸಂಸ್ಥೆಯನ್ನು ನಿರ್ಮಾಣ ಮಾಡಬೇಕಾಗಿ ಬಂದಿದೆ. ಬೆಂಗಳೂರು ನಗರ ದಿನೇ ದಿನೇ ಬೆಳೆಯುತ್ತಿದೆ. ಬೆಂಗಳೂರು ನಗರಕ್ಕೆ 1900 ರಿಂದ ನೀರು ಸರಬರಾಜು ಮಾಡುವುದಕ್ಕೆ ಕಾಲಕಾಲಕ್ಕೆ ಬೇಕಾದಂಥ ಅಭಿವೃದ್ಧಿ ಕಾರ್ಯಗಳನ್ನು ಮಾಡಿದರೂ ಇವತ್ತಿನ ದಿವಸ ನೀರು ಸಾಲದೆ ಬಂದಿದೆ. ಅರ್ಕಾವತಿಯಿಂದ ಬರುವಂಥ ಎಲ್ಲ ನೀರನ್ನು ಉಪಯೋಗಿಸಿದರೂ ಬೆಂಗಳೂರು ನಗರಕ್ಕೆ ನೀರು ಸಾಲದೆ ಬರುತ್ತದೆ. ಬೆಂಗಳೂರು ಇನ್ನೂ ಹೆಚ್ಚು ಹೆಚ್ಚು ಬೆಳೆಯುವ ಸೂಚನೆಗಳು ಕಾಣುತ್ತಿವೆ. ಬೆಂಗಳೂರು ಕೈಗಾರಿಕಾ ನಗರ. ಇಂಥ ಕೈಗಾರಿಕಾ ನಗರಕ್ಕೆ ಎಷ್ಟು ಹೆಚ್ಚು ನೀರು ಅವಶ್ಯಕವೋ ಅಷ್ಟು ಹೆಚ್ಚು ನೀರನ್ನು ಹತ್ತಿರದಲ್ಲಿರುವ ಅರ್ಕಾವತಿಯಿಂದ ಒದಗಿಸುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಮನವರಿಕೆಯಾಗಿದೆ. ಇನ್ನು ಬೆಂಗಳೂರು ನಗರಕ್ಕೆ ಬಹಳ ಸಮೀಪದಲ್ಲಿರುವ ದೊಡ್ಡ ನದಿ ಎಂದರೆ ಕಾವೇರಿ ನದಿ. ಅದಕ್ಕೂ ಬೆಂಗಳೂರು ನಗರಕ್ಕೂ 55 ಮೈಲಿಗಳ ದೂರವಿದೆ. ಅಲ್ಲಿಂದ ಬೆಂಗಳೂರು ನಗರಕ್ಕೆ ಬೇಕಾದ ನೀರು ಸರಬರಾಜು ಮಾಡುವ ಯೋಜನೆ ಸರ್ಕಾರದ ಮುಂದೆ ಬಹಳ ಕಾಲದಿಂದ ಇತ್ತು. ಇವತ್ತು ಮೂರನೇ ನೀರು ಸರಬರಾಜು ಮಾಡತಕ್ಕ ಕೊಳವೆ (ಥರ್ಡ್ ರೈಸಿಂಗ್ ಮೇನ್) ಯನ್ನು ಹಾಕುತ್ತಿದ್ದೇವೆ. ಅದು ಹಾಕಿ ಮುಗಿದ ಮೇಲೂ ಕೂಡ ಬೆಂಗಳೂರು ನಗರಕ್ಕೆ ಒರತಕ್ಕ ನೀರು 30 ದಶಲಕ್ಷ ಗ್ಯಾಲನ್‌ಗಳಿಗಿಂತ ಹೆಚ್ಚಾಗುವುದಿಲ್ಲ. ಅಷ್ಟು ನೀರೂ ಈಗಿರತಕ್ಕ ಜನಸಂಖ್ಯೆಗೆ ಸಾಲದೆ ಬರುತ್ತದೆ.

ಅಲ್ಲದೆ ಕೈಗಾರಿಕಾ ಪಟ್ಟಣಕ್ಕೆ ತಲೆ ಒಂದಕ್ಕೆ ಕನಿಷ್ಟಪಕ್ಷ 40 ಗ್ಯಾಲನ್ ನೀರು ಬೇಕು ಎಂದು ಪರಿಣತರು ಹೇಳಿದ್ದಾರೆ. ಆ ಅಂದಾಜಿನ ಮೇಲೆ ಬೆಂಗಳೂರು ನಗರಕ್ಕೆ ಬಹಳ ನೀರು ಬೇಕಾಗುತ್ತದೆ. ಈಗ ಮಾಡಿರತಕ್ಕ ಅಂದಾಜು ಪ್ರಕಾರ 120 ದಶಲಕ್ಷ ಗ್ಯಾಲನ್ ನೀರನ್ನು ತರತಕ್ಕ ವ್ಯವಸ್ಥೆಯನ್ನು ಸರ್ಕಾರ ಕೈಗೊಳ್ಳುತ್ತಿದೆ. ಇದು ಬಹಳ ದೊಡ್ಡ ಯೋಜನೆ. ಈ ಯೋಜನೆಯಿಂದ ಸಾಕಷ್ಟು ನೀರು ದೊರೆತರೂ ಕೂಡ ಜನರಿಗೆ ಅನೇಕ ಉಪದ್ರವಗಳು ಬರುತ್ತವೆ. ಸರಿಯಾದ ಒಳಚರಂಡಿ ವ್ಯವಸ್ಥೆ ಇಲ್ಲದೆ ಇದ್ದರೆ ಆಷ್ಟೊಂದು ನೀರನ್ನು ತಂದ ವೇಳೆಯಲ್ಲಿ ಬೆಂಗಳೂರು ನಗರದಲ್ಲಿ ವಾಸ ಮಾಡುವವರಿಗೆ ಕಷ್ಟವಾಗುತ್ತದೆ. ಆದುದರಿಂದ ಒಳಚರಂಡಿ ವ್ಯವಸ್ಥೆ, ನೀರಿನ ಸರಬರಾಜು, ಈ ಎರಡು ಕಾರ್ಯಗಳನ್ನೂ ಕೂಡ ಒಮ್ಮೆಲೇಯೇ ಕೈಕೊಂಡು ಮುಗಿಸಬೇಕಾದ್ದು ಅಗತ್ಯ.

(ಶ್ರೀ ಕೆ. ಪುಟ್ಟಸ್ವಾಮಿ)

ಬೆಂಗಳೂರು ನಗರಕ್ಕೆ ಕಾವೇರಿ ನದಿ ಯೋಜನೆಯಿಂದ ತರತಕ್ಕ 120 ದಶಲಕ್ಷ ಗ್ಯಾಲನ್ ನೀರು, ಈಗ ಅರ್ಕಾವತಿಯಿಂದ ಬರತಕ್ಕ 30 ದಶಲಕ್ಷ ಗ್ಯಾಲನ್ ನೀರು, ಒಟ್ಟು 150 ದಶಲಕ್ಷ ಗ್ಯಾಲನ್ ನೀರನ್ನು ತಂದಂಥ ವೇಳೆಯಲ್ಲಿ ಬಂದಂಥ ನೀರು ಹೊರಗಡೆಗೆ ಹೋಗುವುದಕ್ಕೆ ಅನುಕೂಲವಾದ ಒಳಚರಂಡಿ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಆದುದರಿಂದ ಈ ಸಮಗ್ರ ಯೋಜನೆಯನ್ನು ಕೈಕೊಳ್ಳಬೇಕಾದ ಅಗತ್ಯ ಬಂದಿದೆ. ಇದು ಬಹಳ ದೊಡ್ಡ ಕಾರ್ಯ. ಇದಕ್ಕೆ ಸುಮಾರ 26 ಕೋಟಿ ರೂಪಾಯಿ ಖರ್ಚಾಗುತ್ತದೆಂದು ಅಂದಾಜು ಮಾಡಿದ್ದಾರೆ. ಇಷ್ಟು ಹಣವನ್ನು ಒದಗಿಸುವುದು ಬಹಳ ಕಷ್ಟವಾಗುತ್ತದೆ. ಈ ಕಾರ್ಯ ಸಾಧನೆಯಾಗುವುದಕ್ಕೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಭಗೀರಥ ಪ್ರಯತ್ನ ಮಾಡಿದ್ದಾರೆ. ಅವರ ಭಗೀರಥ ಪ್ರಯತ್ನ ಆಗದೆ ಇದ್ದಿದ್ದರೆ ಈ ಕಾರ್ಯ ಕೈಗೂಡತಕ್ಕ ಸೂಚನೆ ಇರಲಿಲ್ಲ. ಈ ಕಾರ್ಯವನ್ನು ಮಾಡುತ್ತೇವೆ ಎಂದು ಸರ್ಕಾರ ಘೋಷಿಸಿದಂಥ ವೇಳೆಯಲ್ಲಿ ಅನೇಕರು ಇದರಲ್ಲಿ ತುಂಬ ಸಂದೇಹವನ್ನು ಇಟ್ಟುಕೊಂಡಿದ್ದರು. ಕೇವಲ 10-15 ಲಕ್ಷ, ಒಂದು ಕೋಟಿ, ರೂಪಾಯಿಗಳ ನೀರು ಸರಬರಾಜು ಯೋಜನೆಯನ್ನು ಮಾಡಬೇಕಾದರೆ ಕಷ್ಟವಿರುವಂಥ ವೇಳೆಯಲ್ಲಿ 25-30 ಕೋಟಿ ರೂಪಾಯಿಗಳ ಯೋಜನೆಯನ್ನು ಕೈಕೊಂಡು ಒಂದು ನಗರಕ್ಕೆ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆ ಮಾಡುವುದು ಎಂದರೆ ಯಾರಿಗಾದರೂ ಕೂಡ ಆಶ್ಚರ್ಯವನ್ನುಂಟುಮಾಡತಕ್ಕ ಕೆಲಸ.

5-30 P.M.

ಆದರೆ ನಮ್ಮ ಅದೃಷ್ಟದಿಂದ ಈ ಕಾರ್ಯ ನಾವು ನಿರೀಕ್ಷಿಸಿದುದಕ್ಕಿಂತ ಸುಲಭವಾಗಿ ನೆರವೇರಿದೆ. ಈ ಕಾರ್ಯಕ್ಕೆ ನ್ಯಾಷನಲ್ ಪ್ಲಾನಿಂಗ್ ಕಮಿಷನ್ನಿನವರು ಬಹಳ ನೆರವಾಗಿದ್ದಾರೆ. ಆ ಕಮಿಷನ್ನಿನ ಸದಸ್ಯರಾದ ಪ್ರೊಫೆಸರ್ ಥಾಕರ್ ಅವರು ಬೆಂಗಳೂರಿಗೆ ಬಂದು ನಮ್ಮ ಇಂಜಿನಿಯರುಗಳೊಡನೆ ಆಲೋಚನೆ ಮಾಡಿ ನಮ್ಮ ಇಚ್ಛೆ ನೆರವೇರುವುದಕ್ಕೆ ಬಹುಮಟ್ಟಿಗೆ ಸಹಾಯಕರಾಗಿದ್ದಾರೆ ಅಲ್ಲದೆ ವಿಶ್ವಬ್ಯಾಂಕಿನ ನೆರವನ್ನು ನಮಗೆ ದೊರಕಿಸುವುದಕ್ಕೂ ಬಹಳ ನೆರವಾಗಿದ್ದಾರೆ. ಅವರು ಈ ಯೋಜನೆ ಕಾರ್ಯಗತವಾಗುವುದಕ್ಕೆ ಕೊಟ್ಟಿರತಕ್ಕ ಸಹಾಯವನ್ನು ಕೃತಜ್ಞತೆಯಿಂದ ನಾವು ನೆನಸಿಕೊಳ್ಳುವುದು ಬಹಳ ಅಗತ್ಯ. ವಿಶ್ವ ಬ್ಯಾಂಕಿನವರು ಈ ಯೋಜನೆಯನ್ನು ಅಧ್ಯಯನ ಮಾಡಿದ ವೇಳೆಯಲ್ಲಿ, ತಾವು ಇದಕ್ಕೆ ನೆರವು ನೀಡಬೇಕಾದರೆ ಇದಕ್ಕೇ ಪ್ರತ್ಯೇಕವಾದ ಮತ್ತು ಸ್ವತಂತ್ರವಾದ ಒಂದು ಸಂಸ್ಥೆಯನ್ನು ಮಾಡಬೇಕು, ಇದು ದೊಡ್ಡ ಕಾರ್ಯ, ಈ ನೀರು ಸರಬರಾಜಿನ ಜವಾಬ್ದಾರಿ ಆ ಸಂಸ್ಥೆಗೆ ಇರಬೇಕೆಂದು ಅಭಿಪ್ರಾಯಪಟ್ಟರು. ಆ ಸಂದರ್ಭದಲ್ಲಿ ಸರಕಾರ ಕೂಡ ಈ ವಿಚಾರದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡಿದೆ. ಆದು ಮಾನ್ಯ ಸದಸ್ಯರಿಗೆ ನೆನಪಿರಬಹುದು. ಕಳೆದ ಒಂದುವರ್ಷದಲ್ಲಿ ಈ ಸರಕಾರ ಮಾಡಿದ ನಿರ್ಧಾರವನ್ನು ನಾನೂ ನನ್ನ ಸಹೋದ್ಯೋಗಿ ಸಚಿವರೂ ಪ್ರಕಟಪಡಿಸಿದ್ದೇವೆ. ಆ ಸಮಯಕ್ಕೆ ಸರಿಯಾಗಿ ಇಂಡಿಯಾ ಸರಕಾರದವರೂ ಇದೇ ರೀತಿ ನಮಗೆ ಸಲಹೆ ಮಾಡಿದ್ದಾರೆ. ಇಂತಹ ದೊಡ್ಡ ಕಾರ್ಯವನ್ನು ಮಾಡುವಾಗ ಇದು ಸುವ್ಯವಸ್ಥಿತವಾಗಿ ನಡೆಯಬೇಕಾದರೆ ಇದಕ್ಕೆ ಪ್ರತ್ಯೇಕವಾದ ಒಂದು ಸ್ವತಂತ್ರ ಸಂಸ್ಥೆಯನ್ನು ರಚನೆ ಮಾಡಬೇಕು, ಇದರಿಂದ ಇದು ಶೀಘ್ರವಾಗಿ ಕೈಗೂಡುತ್ತದೆ ಎಂಬುದೇ ಆ ಸಲಹೆ. ನಮ್ಮ ಸರಕಾರದ ಅಭಿಪ್ರಾಯವೂ ಇದೇ ಆಗಿದೆ. ಇದರ ಜೊತೆಗೆ ವಿಶ್ವಬ್ಯಾಂಕಿನವರೂ ಇದೇ ರೀತಿ ಸಲಹೆ ಮಾಡಿದ್ದಾರೆ. ಅವರು ಇದಕ್ಕೆ ನೆರವು ನೀಡಬೇಕಾಗಿದ್ದರೆ ಒಂದು ಸ್ವತಂತ್ರ ಸಂಸ್ಥೆಯಾಗಬೇಕೆಂದು ಹೇಳಿದ್ದಾರೆ...

ಶ್ರೀ ಸಿದ್ದಯ್ಯ ಕಾಶೀಮಠ.—ಪ್ಲಾನಿಂಗ್ ಕಮಿಷನ್ ವೈಸ್‌ಚೇರ್ಮನ್ ಅವರು ಇದರ ಬಗ್ಗೆ ಏನಾದರೂ ಹೇಳಿದರೆ ?

ಶ್ರೀ ಕೆ. ಪುಟ್ಟಸ್ವಾಮಿ.—ನನಗೆ ಅವರೇನೂ ಹೇಳಿಲ್ಲ. ಪ್ಲಾನಿಂಗ್ ಕಮಿಷನ್ನಿನ ಒಬ್ಬ ಸದಸ್ಯರು ಏನಾದರೂ ಹೇಳಿದರೆ ಆದು ಅವರ ಸಲಹೆ ಎಂದು ನಾನು ಭಾವಿಸಿದ್ದೇನೆ. ಈ ಎಲ್ಲ ಕಾರಣಗಳಿಂದ ಈ ಮಸೂದೆಯನ್ನು ಸಭೆಯ ಮುಂದೆ ತಂದಿದ್ದೇನೆ. ಈ ಮಸೂದೆ ಸಾಮಾನ್ಯವಾಗಿ ವಿದ್ಯುಚ್ಛಕ್ತಿ ಕಾನೂನಿನ ಪ್ರಕಾರ ರೂಪಗೊಂಡಿದೆ. ಇದರಂತೆ ಸಂಸ್ಥೆ ರಚನೆಯಾಗಿ, ಸ್ಥಾಪನೆಯಾಗಿ ಆದು ನಡೆಯುವಾಗ ನಮ್ಮ ಅನುಭವದಿಂದ ಏನಾದರೂ ಬದಲಾವಣೆ ಅವಶ್ಯಕವೆಂದು ಕಂಡುಬಂದರೆ ಅದನ್ನು ಮಾಡಿಕೊಳ್ಳಬಹುದು. ಈಗ ಇರುವ ವ್ಯವಸ್ಥೆಯಂತೆ ಬೆಂಗಳೂರು ನಗರದ ನೀರು ಸರಬರಾಜಿಗೆ ಸಂಬಂಧಪಟ್ಟ ಹೆಡ್‌ವರ್ಕ್ಸ್ ತಿಪ್ಪಗೊಂಡನಹಳ್ಳಿ ಮತ್ತು ಹೆಸರುಘಟ್ಟದಿಂದ ನೀರು ತಂದು ಒಟ್ಟಿಗೆ ಅದನ್ನು ಬೆಂಗಳೂರು ನಗರವ ಕಾರ್ಪೊರೇಷನ್ನಿಗೆ ಕೊಡುತ್ತೇವೆ. ನಗರದಲ್ಲಿ ನರಬರಾಯು ವ್ಯವಸ್ಥೆಯನ್ನು ಅವರು ಮಾಡಿದ್ದಾರೆ. ಅವರು ಕೂಡ ಈ ವಿಷಯವನ್ನು ಪರಿಶೀಲನೆ ಮಾಡಿ

ಸರಕಾರಕ್ಕೆ ಈ ಜವಾಬ್ದಾರಿಯನ್ನು ವಹಿಸುವ ನಿರ್ಣಯವನ್ನು ಮಾಡಿದ್ದಾರೆ. 25-30 ಕೋಟಿ ರೂಪಾಯಿ ಖರ್ಚು ಮಾಡುವುದು ಹೆಚ್ಚಿನ ಜವಾಬ್ದಾರಿಯಾಗಿರುವುದರಿಂದ ಈ ಕಾರ್ಯವನ್ನು ಅವರು ನಡೆಸುವುದು ಕಷ್ಟವಾಗುತ್ತದೆ ಎಂಬ ಕಾರಣದಿಂದ ಹೀಗೆ ನಿರ್ಣಯ ಮಾಡಿದ್ದಾರೆ.

Sri SIDDAIAH KASHIMATH.—Will there be Bangalore Water Supply Board ?

Sri K. PUTTASWAMY.—It is Bangalore Water Supply and Sewerage Act. It is a statutory body; and independently it will function.

ಆದುದರಿಂದ ಇದು ಬಹಳ ಆಗತ್ಯವಾದ ಕಾನೂನು, ಇದನ್ನು ಸಭೆಯವರು ಒಪ್ಪಿಕೊಳ್ಳಬೇಕೆಂದು ವಿನಂತಿ. ಇದರಲ್ಲಿ ಹೊಸ ಪ್ರೊವಿಷನ್ಸ್ ಏನೂ ಇಲ್ಲ; ಎಲ್ಲಾ ವಿದ್ಯುಚ್ಛಕ್ತಿಯ ಕಾನೂನಿನ ಮೇರೆಗೆ ಮಾಡಲಾಗಿದೆ. ಈ ಸಂಸ್ಥೆ 'ನಾನ್‌ಟ್ರೇಡಿಂಗ್ ಕಾರ್ಪೊರೇಷನ್', ಈ ಅಡಳಿತದಲ್ಲಿ ಹೆಚ್ಚು ಹಣ ಉಳಿದರೆ ನೀರಿನ ಬಳಕದಾರರಿಗೆ ರಿಬೇಟ್ ಕೊಡಬೇಕೆಂದಿದೆ. ನಗರದ ಜನರಿಗೆ ಇದರಿಂದ ಅನುಕೂಲವಾಗುತ್ತದೆ. ಇದನ್ನು ಒಪ್ಪಿಕೊಳ್ಳಬೇಕೆಂದು ನನ್ನ ಸಲಹೆ.

[MR. CHAIRMAN (SRI S. M. GURADDI) in the Chair]

†**Sri V. S. PATIL.**—May I know whether the State Government, Central Government and Planning Commission and the World Bank have agreed to have a separate independent body ? May I know whether the World Bank Authority who are going to finance this water supply as stated in the objects and reasons have imposed conditions precedent for giving this loan for the creation of this particular body ?

Sri K. PUTTASWAMY.—I will make it very clear that they want an independent autonomous body to be brought into existence so that they may finance us.

Sri V. S. PATIL.—Can the Hon'ble Minister allow us to look into that latter which imposes this condition precedent upon us ?

Mr CHAIRMAN.—Not necessary.

Sri K. PUTTASWAMY.—I am very much surprised by the submission made by the Hon'ble Member. I am making a categorical statement that they have suggested the formation of an autonomous corporation and then they will be in a position to help. If the House accords approval to this Bill, then the question of their giving assistance will arise. If the House does not accord approval to this Bill, and if the House can make independent arrangements for financing the scheme, we will also be very happy.

Sri V. S. PATIL.—It is not a question of doubting that there might be such a letter or not. When the Hon'ble Minister made a statement, we are convinced that there is correspondence to that effect. There is no doubt about it. But the question is whether this World Bank has made it a condition precedent to have an independent and then they will consider the question of giving loan or whether it is merely a suggestion.

Sri K. PUTTASWAMY.—My Hon'ble friend is reading too much to what I have said. They have suggested the formation of autonomous Board and then they would be in a position to help us.

Sri ANNA RAO GANAMUKHI (Afzalpur).—What is the rate of interest that the World Bank is charging and secondly what are the instalments of repayments, in how many years repayment should be

(SRI ANNA RAO GANAMUKHI)

made and whether the State Government has stood guarantee for this loan or whether they are directly financing the loan to that Board to be constituted ?

Sri K. PUTTASWAMY.—I am sure my honourable friend knows the procedure of these international financing bodies. They never give the loan to any such autonomous bodies directly. It goes through the Government. Then a question was raised about the rate of interest. We are yet in a negotiation stage. Most of the members may be knowing that the World Bank charges a very nominal rate of interest. We hope that we would be able to get this loan assistance at a very cheap rate of interest and in very convenient instalments. Regarding sewer and sewerage, sewer is that which flows in sewerage.

An HON'BLE MEMBER.—Is it on the advice of the World Bank that the Government thought it fit to have an independent body ?

Sri K. PUTTASWAMY.—I have already submitted to this House that the Government had taken a decision independent of these bodies. At that time the Government of India also advised us and the Planning Commission too had advised us accordingly. The World Bank also would like to have an autonomous body.

Mr. CHAIRMAN.—The House now stands adjourned to meet tomorrow at 8-30 A.M.

The House adjourned at Forty-five Minutes past Five of the Clock to meet again at Thirty Minutes past Eight of the Clock on Saturday, the 4th July 1964.

W D 3305—GPB—900—9-10-64